**ದಿನಾಂಕಃ 19.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಮರೀಗೌಡರ ಮಗ ಕಾಂತರಾಜು ಯಾರು ಎಂದರೆ ಸಾಕ್ಷಿ ನಾನು ಅವನಿಗೆ ಇದೇ ವರ್ಷದ 4 ನೇ ತಿಂಗಳಿನಲ್ಲಿ ಜಮೀನನ್ನು ಮಾರಾಟ ಮಾಡಿರುತ್ತೇನೆ ಎನ್ನುತ್ತಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ನ್ಯಾಯಾಲಯದ ಗಮನಕ್ಕೆ ನೀವು ಮಾರಾಟ ಮಾಡಿರುವ ಆಸ್ತಿಯ ಬಗ್ಗೆ ತಂದಿದ್ದೀರಾ ಎಂದರೆ, ಖಾತೆ ನನ್ನ ಹೆಸರಿನಲ್ಲಿತ್ತು, ಮಾರಿದ್ದೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಹಾಗೂ ಪ್ರತಿವಾದಿಯರಿಗೆ ಮೋಸಮಾಡುವ ಉದ್ದೇಶದಿಂದ ಆಸ್ತಿಯನ್ನು ಮಾರಾಟ ಮಾಡಿದ್ದರೂ, ಗಮನಕ್ಕೆ ತರದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹಕ್ಕಿಗೆ ಚ್ಯುತಿ ತರುವ ಉದ್ದೇಶದಿಂದ ಕಂದಾಯ ಇಲಾಖೆಯವರೊಂದಿಗೆ ಶರೀಕಾಗಿ ನಾನು ಈ ರೀತಿ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ನ್ಯಾಯಾಲಯದಲ್ಲಿ ದಾವೆಯು ಇತ್ಯರ್ಥಕ್ಕೆ ಇದ್ದಾಗಲೂ ಸಹ, ಯಾವುದೇ ಹಕ್ಕು ಇಲ್ಲದೇ ಇದ್ದರೂ, ಹಕ್ಕು ನಿರ್ಧರಣೆಯಾಗುವ ಮೊದಲೇ ಮೋಸದಿಂದ ಮಾರಾಟ ಮಾಡಿದ್ದೇನೆ ಎಂದರೆ ಸುಳ್ಳು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ, ಮಾರಾಟ ಮಾಡಿರುವ ದಾಖಲೆಗಳನ್ನು ಪಡೆದು, ಪಾಟೀಸವಾಲನ್ನು ಮಾಡಲು ಸಮಯ ಕೋರಿದ್ದು ಹಾಗೂ ಭೋಜನದ ಸಮಯವಾಗಿರುವುದರಿಂದ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ